ಬರುತ್ತದೆ. ಹೆಚ್ಚು ಹಣ ಖರ್ಚುಗಾಗುತ್ತದೆ ಎನ್ನುವ ಕಾರಣದಿಂದ ಈ ವ್ಯವಸ್ಥೆ ಮಾಡಿರುವುದು. ಹಿಂದಿನ ಕಾಲದಲ್ಲಿ ಕೂಡ ಪುಸ್ತಕಗಳನ್ನು ಗಾಡಿಯಲ್ಲಿ ತೆಗೆದುಕೊಂಡು ಮನೆಮನೆಗೆ ಕೊಟ್ಟು ಅವರು ಓದಿ ಮುಗಿಸಿದ ಮೇಲೆ ಎಂಟು ದಿವಸಕ್ಕೆ ವಾಪಸ್ಸು ತರುವಂತಹ ಪದ್ಧತಿ 100-200 ವರ್ಷದಿಂದಲೂ ಕೂಡ ಇದೆ. ಈ ಪದ್ಧತಿಗೆ ಅನುಗುಣವಾಗಿ ಆಧುನಿಕವಾಗಿ ಸಂಚಾರಿ ಗ್ರಂಥಾಲಯ ಮಾಡಿರುವಂತಹ ವ್ಯವಸ್ಥೆಯಾಗಿದೆ. ಇನ್ನು ಪುಸ್ತಕ ಖರೀದಿ ಮಾಡುವುದರಲ್ಲಿ ಅನ್ಯಾಯವಾಗಿದ್ದರೆ ನನಗೆ ಅದರ ಬಗ್ಗೆ ಮಾಹಿತಿ ಕೊಟ್ಟರೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಯು.ಆರ್. ಸಭಾಪತಿ : ಮಾನ್ಯ ಉಪಾಧ್ಯಕ್ಷರೇ,14 ಗ್ರಂಥಾಲಯಗಳಲ್ಲಿ 6 ಗ್ರಂಥಾಲಯಗಳು ವ್ಯವಸ್ಥಿತವಾಗಿಲ್ಲವೆಂದು, ವಾಹನ ಕೆಟ್ಟು ಎಲ್ಲೋ ನಿಂತು ಹೋಗಿದ್ದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಆರ್. ಕೃಷ್ಣಪ್ಪ : 14 ಸಂಚಾರಿ ವಾಹನಗಳು ಕೆಲಸ ಮಾಡುತ್ತಿವೆ. ಸಣ್ಣಪುಟ್ಟ ರಿಪೇರಿ ಇರುವಾಗ ಒಂದೆರಡು ದಿವಸ ನಿಲ್ಲಿಸಿರುವುದು ಉಂಟು. ಎಲ್ಲಾ ವ್ಯವಸ್ಥಿತವಾಗಿ ಚೆನ್ನಾಗಿ ಕೆಲಸ ನಡೆಯುತ್ತಿದೆ.

ಶ್ರೀ ಯು.ಆರ್. ಸಭಾಪತಿ : ತಮಗೆ ಸಾಕಷ್ಟು ಮಾಹಿತಿ ಒದಗಿಸಿಲ್ಲ. ತಾವು ಮಾಹಿತಿ ಪಡೆಯಬೇಕು. ಇದರಲ್ಲಿ ಸಾಕಷ್ಟು ಭ್ರಷ್ಟಾಚಾರ ನಡೆಯುತ್ತಿದೆ. ಇದರ ಬಗ್ಗೆ ತಾವು ಇನ್‌ವೆಸ್ಟಿಗೇಷನ್ ಮಾಡಬೇಕು. ಈ ಗ್ರಂಥಾಲಯದಲ್ಲಿ ಇರುವಂತಹ ಪುಸ್ತಕಗಳು ಸರಿಯಾಗಿ ಓದುವುದಕ್ಕೆ ಆಗದೇ ಇರುವಂತಹ ರೀತಿಯಲ್ಲಿ ಇದೆ. ಅಥವಾ ಇರುವಂತಹ ಪುಸ್ತಕಗಳನ್ನು ಮತ್ತೆ, ಮತ್ತೆ ಕೊಂಡುಕೊಳ್ಳುವ ರೀತಿಯಲ್ಲಿ ನಡೆಯುತ್ತಿದೆ. ಕಬ್ಬನ್ ಪಾರ್ಕ್‌ನಲ್ಲಿ ಮೂರು ಗ್ರಂಥಾಲಯಗಳು ಇವೆ. ಅದು ಎಷ್ಟು ಜನರಿಗೆ ಪ್ರಯೋಜನವಾಗುತ್ತದೆಂದು ಇನ್‌ವೆಸ್ಟಿಗೇಷನ್ ಮಾಡಬೇಕೆಂದು ನನ್ನ ಕೋರಿಕೆ.

ಶ್ರೀ ಆರ್. ಕೃಷ್ಣಪ್ಪ : ಮಾನ್ಯ ಉಪಾಧ್ಯಕ್ಷರೇ, 3-4 ತಿಂಗಳಾದ ಮೇಲೆ ಪುಸ್ತಕ ಹರಿದು ಹೋದಮೇಲೆ ಅದೇ ಪ್ರತಿಗಳನ್ನು ತೆಗೆದುಕೊಳ್ಳುವ ಪ್ರತೀತಿ ಇದೆ. ಮೂರು ಪ್ರತಿಗಳನ್ನು ಕೊಂಡುಕೊಳ್ಳುವುದಕ್ಕೆ ಮಾತ್ರ ಅವರಿಗೆ ಅಧಿಕಾರ ಉಂಟು. ಆ ರೀತಿಯಾಗಿ ಏನಾದರೂ ಹೆಚ್ಚಿಗೆ ಕೊಂಡುಕೊಂಡಿದ್ದರೆ ಅದರ ಬಗ್ಗೆ ಮಾಹಿತಿ ನನ್ನ ಕೈಗೆ ಸಿಕ್ಕಿದರೆ ಅದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

ಪರಿಶಿಷ್ಟ ಜಾತಿ, ವರ್ಗದ ಶಾಲಾ ಕಾಲೇಜು ನೌಕರರು ಅನುದಾನ ಕೋರಿ ಧರಣಿ

151- ಶ್ರೀ ಎಸ್.ವಿ. ರವೀಂದ್ರನಾಥ (ಮಾಯಕೊಂಡ) : ಮಾನ್ಯ ಪ್ರಾಥಮಿಕ, ಪ್ರೌಢ ಹಾಗೂ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪರಿಶಿಷ್ಟ ಜಾತಿ/ವರ್ಗದ ಶಾಲಾ ಕಾಲೇಜು ನೌಕರರು ಅನುದಾನ ನೀಡಬೇಕೆಂದು ಧರಣಿ ನಡೆಸುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಈ ಸಂಸ್ಥೆಗಳಿಗೆ ಅನುದಾನಕ್ಕೊಳಪಡಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು) :

ಅ) ಹೌದು.

ಆ) ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಸಂಸ್ಥೆಗಳಿಗೆ ಅನುದಾನಕ್ಕೆ ಒಳಪಡಿಸುವ ವಿಚಾರದ ಬಗ್ಗೆ ಪರಿಶೀಲಿಸಿ ವರದಿ ನೀಡಲು ಉಪ ಮುಖ್ಯಮಂತ್ರಿಯವರು ಅಧ್ಯಕ್ಷತೆಯಲ್ಲಿ ಸಚಿವ ಸಂಪುಟದ ಉಪ ಸಮಿತಿಯನ್ನು ಪುನಃ ರಚಿಸಲಾಗಿದೆ.

ಶ್ರೀ ಎಸ್.ಎ. ರವೀಂದ್ರನಾಥ್ : ಮಾನ್ಯ ಉಪಾಧ್ಯಕ್ಷರೇ, ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದ ಸಂಸ್ಥೆಗಳಿಗೆ ಅನುದಾನಕ್ಕೆ ಒಳಪಡಿಸುವ ವಿಚಾರದ ಬಗ್ಗೆ ಪರಿಶೀಲಿಸಿ ವರದಿ ನೀಡಲು ಉಪ ಮುಖ್ಯಮಂತ್ರಿಯವರು ಅಧ್ಯಕ್ಷತೆಯಲ್ಲಿ ಸಚಿವ ಸಂಪುಟದ ಉಪ ಸಮಿತಿಯನ್ನು ಪುನಃ ರಚಿಸಲಾಗಿದೆ ಎಂದು ಹೇಳಿದ್ದಾರೆ. ಹಾಗಾದರೆ ಮೊದಲು ಯಾವ ಸಮಿತಿ ಇತ್ತು? ಅದು ಏನು ವರದಿ ಕೊಟ್ಟಿತ್ತು ಎಂದು ಕೇಳುತ್ತೇನೆ.

ಶ್ರೀ ಹೆಚ್.ಜಿ. ಗೋವಿಂದೇಗೌಡ : ಮಾನ್ಯ ಉಪಾಧ್ಯಕ್ಷರೇ, ಮೊದಲು ಒಂದು ಸಮಿತಿ ಮಾಡಿದ್ದು, ಅದಕ್ಕೆ ಇನ್ನೂ ಮೂರು ಜನರನ್ನು ಸೇರಿಸಬೇಕೆಂದು ಹೇಳಿದರು. ಮೂರು ಜನರನ್ನು ಸೇರಿಸಿ ಉಪಸಮಿತಿ ಮಾಡಿದ್ದಾರೆ. ಅದರ ಬಗ್ಗೆ ವಿವರವಾಗಿ ಹೇಳುವುದಾದರೆ ಪರಿಶಿಷ್ಟ ಜಾತಿ / ವರ್ಗದವರು ಬಹಳ ವರ್ಷಗಳಿಂದ ಎಂದರೆ 1.6.97ರಿಂದೀಚೆಗೆ ಯಾವುದೇ ಶಾಲಾಕಾಲೇಜುಗಳು ನಡೆಸಿದರೂ ಸಹ ಅದಕ್ಕೆ ಅನುದಾನ ಕೊಡುವುದಕ್ಕಾಗುವುದಿಲ್ಲವೆಂದು ತೀರ್ಮಾನವಾಗಿತ್ತು. ಆದರೆ ಮಾನವೀಯತೆಯ ದೃಷ್ಟಿಯಿಂದ ಮಾನ್ಯ ಮುಖ್ಯಮಂತ್ರಿಗಳಿಗೆ, ಮಂತ್ರಿಗಳಿಗೆ, ಚುನಾಯಿತ ಪ್ರತಿನಿಧಿಗಳಿಗೆ ಸಮಸ್ಯೆಗಳನ್ನು ಹೇಳುತ್ತಿದ್ದರು. ನಾವು ಶಾಲಾಕಾಲೇಜು ಪ್ರಾರಂಭ ಮಾಡಿದ್ದು, ಎಲ್ಲಿ ಅವಶ್ಯಕತೆ ಇದೆ, ಎಲ್ಲಿ ಇನ್‌ಫ್ರಾಸ್ಟ್ರಕ್ಚರ್ ಚೆನ್ನಾಗಿ ಮಾಡಿದ್ದೇವೆ ಅಂತಹ ಕಡೆ ಕೊಡಿ, ಎಲ್ಲಿ ಕೆಲವು ಕಡೆ ಸರಿಯಾಗಿ ಇಲ್ಲ ಅಂತಹ ಕಡೆ ಕೊಡಬೇಡಿ, ಇದರಿಂದ ಸರ್ಕಾರದ ಬೊಕ್ಕಸಕ್ಕೆ ತೊಂದರೆಯಾಗುತ್ತದೆಂದು ಹೇಳಿದರು. ಅದಕ್ಕೋಸ್ಕರ ಉಪಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ 7 ಜನರ ಒಂದು ಉಪಸಮಿತಿ ಮಾಡಿದ್ದು, ನಂತರ 2 ಜನ ಸೇರಿಸಲಾಗಿದೆ. ಅದರಲ್ಲಿ ಇಡೀ ರಾಜ್ಯಾದ್ಯಂತ ಯಾವರೀತಿ ನಡೆಯುತ್ತಿದೆ ಎನ್ನುವುದನ್ನು ನೋಡಿಕೊಂಡು ತೀರ್ಮಾನ ಮಾಡಬೇಕೆಂದಿದ್ದು, ಈಗಾಗಲೇ 3-4 ಸಭೆಗಳು ಆಗಿವೆ. ಪುನಃ ಮತ್ತೆ ಸಭೆ ಮಾಡಿ ಅದರ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುತ್ತೇವೆ.

ಶ್ರೀ ಎಸ್.ಎ. ರವೀಂದ್ರನಾಥ್ : ಮಾನ್ಯ ಉಪಾಧ್ಯಕ್ಷರೇ, ಇದೇ ರೀತಿಯ ಉತ್ತರವನ್ನು 3-4 ಬಾರಿ ಹೇಳಿದ್ದಾರೆ. ಅವರು ಎಷ್ಟು ದಿವಸದಲ್ಲಿ ವರದಿ ಕೊಡುತ್ತಾರೆ? ಬಹಳಷ್ಟು ವಿದ್ಯಾ ಸಂಸ್ಥೆಗಳು ಇವೆ ಅದಕ್ಕೆ ಒಂದು ಟೈಂ ಬೌಂಡ್ ಕಾರ್ಯಕ್ರಮ ಮಾಡಬೇಕೆಂದು ಕೇಳುತ್ತೇನೆ.

ಶ್ರೀ ಹೆಚ್.ಜಿ. ಗೋವಿಂದೇಗೌಡ : ಟೈಂ ಬೌಂಡ್ ಅಂತೂ ಕೊಡುವುದಕ್ಕಾಗುವುದಿಲ್ಲ. ದಿನಾಂಕ 1.6.87ರಿಂದೀಚೆಗೆ ಯಾರು ಅನಧಿಕೃತವಾಗಿ ಶಾಲಾ ಕಾಲೇಜುಗಳನ್ನು ನಡೆಸುತ್ತಿದ್ದಾರೆ ಅವರಿಗೆ ಕಾನೂನಿನ ಪ್ರಕಾರ ಕೊಡುವುದಕ್ಕೆ ಅವಕಾಶ ಇಲ್ಲ. ಕೆಲವು ಕಡೆಗಳಲ್ಲಿ ತುಂಬಾ

ತೊಂದರೆಯಲ್ಲಿದ್ದಾರೆ. ಇದನ್ನು ಯೋಚನೆ ಮಾಡಿ ಸರ್ಕಾರದವರು ಕ್ರಮ ಕೈಗೊಂಡಿದ್ದು. ಟೈಂ ಬೌಂಡ್ ಮಾಡುವುದಕ್ಕೆ ಇದು ಇಷ್ಟೇ ದಿವಸದಲ್ಲಿ ಮಾಡುತ್ತೇವೆ, ಅದಕ್ಕೆ ಹಣ ಎಷ್ಟು ಬೇಕಾಗುತ್ತದೆ, ಖರ್ಚು ಎಷ್ಟು ಬೀಳುತ್ತದೆ ಅದನ್ನೆಲ್ಲಾ ಪರಿಶೀಲನೆ ಮಾಡಿ ಸಾಧ್ಯವಾದಷ್ಟು ಜಾಗ್ರತೆ ತೀರ್ಮಾನ ಮಾಡಬೇಕೆನ್ನುವ ಘನ ಉದ್ದೇಶದಿಂದ ಈ ಉಪಸಮಿತಿಯನ್ನು ಸರ್ಕಾರ ಮಾಡಿತರಕ್ಕಂಥಾದ್ದು.

ಶ್ರೀ ಎಂ. ಮಲ್ಲಿಕಾರ್ಜು ಖರ್ಗೆ (ವಿರೋಧ ಪಕ್ಷದ ನಾಯಕರು) : ಮಾನ್ಯ ಉಪಾಧ್ಯಕ್ಷರೇ, ಟೈಂ ಬೌಂಡ್ ಪ್ರಕಾರ ಹೇಳುವುದಕ್ಕೆ ಆಗುವುದಿಲ್ಲ ಎನ್ನುವುದು ಅಷ್ಟೊಂದು ಸಮಂಜಸವಾದಂತಹ ಉತ್ತರವಲ್ಲ. ಏಕೆಂದರೆ ಸುಮಾರು ತಾವು 217 ಐ.ಟಿ.ಐ.ಗಳಿಗೆ ಗ್ರಾಂಟ್‌ಇನ್‌ಏಡ್ ಮಾಡಿದ್ದೀರಿ. ಇಡೀ ರಾಜ್ಯದಲ್ಲಿ ಮೊದಲಿನಿಂದಲೂ ಯಾವುದೇ ಇಂಡಸ್ಟ್ರೀಯಲ್ ಟ್ರೈನಿಂಗ್ ಇನ್ಸ್‌ಟಿಟ್ಯೂಟ್‌ಗೆ ಗ್ರಾಂಟ್ ಇನ್ ಏಡ್ ಕೋಡ್ ಇರಲಿಲ್ಲ. ಆದರೆ ನಿಮಗೆ ಒತ್ತಾಯ ಬಂದಿದ್ದರಿಂದ ಸರ್ಕಾರ ಅದಕ್ಕೆ ಮಣಿದು ಕೊಟ್ಟಿದೆ. ಅದನ್ನು ಬೇಡ ಎಂದು ಹೇಳಲಿಲ್ಲ. ಅದು ಪ್ರೊಫೆಷನಲ್ ಕೋರ್ಸ್ ಎನ್‌ಕರೇಜ್‌ಮೆಂಟ್ ಮಾಡಬೇಕೆನ್ನುವ ದೃಷ್ಟಿಯಿಂದ ಕೊಟ್ಟಿರಬಹುದು. ಆದರೆ ಇವು ಅದಕ್ಕಿಂತ ಹಿಂದಿನದು. ಏನೋ ದುರ್ದೈವ ಹೆಚ್ಚಿನ ಹೈಸ್ಕೂಲ್ ಕೊಡುವುದಕ್ಕೆ ಹೋಗಿ ತಿರುಗಿ ಮುರುಗಿ ಮಾಡಿ ಪರಿಸ್ಥಿತಿ ಏನಾಗಿದೆ ಎಂದರೆ ಯಾರು ಚೆನ್ನಾಗಿ ನಡೆಸುತ್ತಾರೆ ಅವರಿಗೂ ಅದೇ ಪನಿಶ್‌ಮೆಂಟ್, ಯಾರು ವ್ಯಾಪಾರ ಮನೋಭಾವನೆಯಿಂದ ಕಮರ್ಷಿಯಲ್ ಆಗಿ ನಡೆಸುತ್ತಿದ್ದಾರೆ ಅವರಿಗೂ ಒಂದೇ ದೃಷ್ಟಿಯಿಂದ ನೋಡುವುದಾದರೆ, ಹೇಗೆ? ಯಾವ ಸಂಸ್ಥೆಗೆ ಬೆಂಬಲ ಇದೆ, ಮಠ, ಮಂದಿರಗಳು, ಮಸೀದಿ, ಚರ್ಚುಗಳು ಟ್ರಸ್ಟ್‌ಗಳ ಬೆಂಬಲ ಇದೆ ಅವರು ಸುಖವಾಗಿ ನಡೆಸಿಕೊಂಡು ಆಮೇಲೆ ದುಡ್ಡು ತೆಗೆದುಕೊಳ್ಳಬಹುದು. ಆದರೆ ಕೆಲವರು ಏನೂ ಇಲ್ಲದೆ ಈಗ ಪ್ರಾರಂಭ ಮಾಡುತ್ತಿರುವಾಗ ನೀವು ಅವರ ಮೇಲೆ ಕೊಡಲಿ ಪ್ರಹಾರ ಹಾಕಿದರೆ ಹೇಗಾಗುತ್ತದೆ? ಆದುದರಿಂದ-ಸ್ಪೆಷಲ್ ಕನ್ಸಿಡರ್ ಮಾಡಿ ಮೊದಲಿನಿಂದಲೂ ಸಬ್ ಕಮಿಟಿ ಎಂದು ಹೇಳುತ್ತಿದ್ದೀರಿ; The Sub Committees can take decision on 218 I.T.I.s : Why should they not take decision on these primary schools and high schools?

ಶ್ರೀ ಹೆಚ್.ಜಿ. ಗೋವಿಂದೇಗೌಡ : ಮಾನ್ಯ ಉಪಾಧ್ಯಕ್ಷರೇ, ಐ.ಟಿ.ಐ. ನನ್ನ ಇಲಾಖೆಗೆ ಸಂಬಂಧಪಟ್ಟಂಥಾದ್ದು ಅಲ್ಲ, ಆದರೂ ಸಹ ಯಾವಾಗ ಕೊಟ್ಟಿದ್ದಾರೆ, ಏನು ಎಂಬ ಮಾಹಿತಿ ಇದ್ದಿದ್ದರೆ ನಾನು ಸರಿಯಾದಂತಹ ಉತ್ತರವನ್ನು ತಮಗೆ ಕೊಡುತ್ತಿದ್ದೆ, ಆದರೆ ನನ್ನ ಬಳಿ ಈಗ ಮಾಹಿತಿ ಇಲ್ಲದೇ ಇರುವುದರಿಂದ ನಾನು ಉತ್ತರ ಕೊಡುವಂತಹ ಪರಿಸ್ಥಿತಿಯಲ್ಲಿ ಇಲ್ಲ. ಆದರೆ ದಿನಾಂಕ 1.6.87ರಿಂದ ಈಚೆಗೆ ಯಾವುದೇ ಪ್ರೈಮರಿ, ಹೈಸ್ಕೂಲ್, ಪಿ.ಯು.ಸಿ ಕಾಲೇಜುಗಳಿಗೆ ಯಾವುದಕ್ಕೂ ಅನುದಾನವನ್ನು ಕೊಟ್ಟಿಲ್ಲ. ಆದರೆ ತಾವು ಹೇಳಿದ ಹಾಗೆ ಎಲ್ಲಿ ಅವಶ್ಯಕತೆ ಇದೆ, ಮತ್ತೆ ನಿಜವಾಗಿ ಬಡವರು ಇರುವಂತಹ ಕಡೆಗಳಲ್ಲಿ ಇನ್‌ಫ್ರಾಸ್ಟ್ರಕ್ಚರ್ ಅನ್ನು ಹೆಚ್ಚಾಗಿ ಡೆವಲಪ್ ಮಾಡುವಂತಹ ಅವಶ್ಯಕತೆ ಇದೆ. ಕೆಲವು ಕಡೆ ಸ್ಕೂಲ್‌ಗಳು, ಕಾಲೇಜುಗಳು ಇಲ್ಲವೆಂದು ಹೇಳುತ್ತಿದ್ದಾರೆ, ಇದರ ಬಗ್ಗೆ ವಿವರಗಳನ್ನು ತರಿಸುತ್ತೇವೆ ಆದಷ್ಟು ಜಾಗ್ರತೆ ಮಾಡಬೇಕೆಂಬ ಆಸೆ ಇಟ್ಟುಕೊಂಡಿದ್ದೇವೆ ನಾಲ್ಕು ಮೀಟಿಂಗ್‌ಗಳು ಆಗಿದೆ, ಇದರ ಬಗ್ಗೆ ಚಿಂತನೆ ಮಾಡುತ್ತಿದ್ದೇವೆ.

ಉಪಾಧ್ಯಕ್ಷರು : ಮಾನ್ಯ ರಾಮದಾಸ್‌ರವರೇ, ತಮ್ಮ ಪ್ರಶ್ನೆ ಸಂಖ್ಯೆ : 152 (977) ಕ್ಕೆ ಮಾನ್ಯ ಆರೋಗ್ಯ ಮಂತ್ರಿಗಳು ಸಮಯವನ್ನು ಕೇಳಿದ್ದಾರೆ.

ಶ್ರೀ ಎ. ರಾಮದಾಸ್ : ಮಾನ್ಯ ಉಪಾಧ್ಯಕ್ಷರೇ, ನಾನು ಕೇಳಿರುವಂತಹ ಪ್ರಶ್ನೆಗೆ ಯಾವುದೋ ಜಿಲ್ಲೆಯಿಂದ ಉತ್ತರ ಬರುವಂಥಾದ್ದು ಅಲ್ಲ, ಇಲ್ಲೇ ಮಲ್ಟಿಸ್ಟೋರ್ ಬಿಲ್ಡಿಂಗ್‌ನಿಂದ ವಿಧಾನಸೌಧಕ್ಕೆ ಉತ್ತರ ಬರುವಂಥಾದ್ದು. ನನ್ನ ಪ್ರಶ್ನೆ ಕಳೆದ ಮೂರು ಸಾಲಿನ ಆಯವ್ಯಯದಲ್ಲಿ ಆರೋಗ್ಯ ಇಲಾಖೆಗೆ ಕೊಟ್ಟಿರುವಂತಹ ಹಣವೆಷ್ಟು? ಖರ್ಚು ಎಷ್ಟು ಆಗಿದೆ? ಪ್ರಸಕ್ತ ಸಾಲಿನಲ್ಲಿ ಕೊಟ್ಟಿರುವಂತಹ ಹಣ ಉಪಯೋಗ ಮಾಡಿದ್ದಿರಾ, ಎಂಬುದು ನನ್ನ ಪ್ರಶ್ನೆಯಾಗಿದೆ. ಇದಕ್ಕೆ ಉತ್ತರವನ್ನು ಮಲ್ಟಿ ಸ್ಟೋರ್ ಬಿಲ್ಡಿಂಗ್‌ನಲ್ಲಿರುವಂತಹ ಇಲಾಖೆಯಿಂದ ಉತ್ತರವನ್ನು ತರಿಸುವಂಥಾದ್ದು, ಅಲ್ಲಿಂದ ಇಲ್ಲಿಗೆ ಉತ್ತರ ಬರಬೇಕಾದರೆ ಎಷ್ಟು ದಿವಸ ಬೇಕಾಗುತ್ತದೆ.

ಉಪಾಧ್ಯಕ್ಷರು : ಮಾನ್ಯ ಮಂತ್ರಿಗಳು ಸಮಯ ಕೇಳಿದ್ದಾರೆ.

ಡಾ|| ಹೆಚ್.ಸಿ. ಮಹದೇವಪ್ಪ : ಮಾನ್ಯ ಉಪಾಧ್ಯಕ್ಷರೆ, ಇದರ ಡಿಟೇಲ್ ತಯಾರು ಮಾಡಿ ಉತ್ತರವನ್ನು ಕೊಡಬೇಕು, ಆದುದರಿಂದ ಡಿಟೇಲ್‌ಅನ್ನು ತರಿಸಿ ಕೊಡುತ್ತೇನೆ.

ಉಪಾಧ್ಯಕ್ಷರು : ಮಾನ್ಯ ಮಂತ್ರಿಗಳು ಇನ್ನು ಒಂದು ವಾರದಲ್ಲಿ ಉತ್ತರವನ್ನು ಇಲಾಖೆಯಿಂದ ತರಿಸಿಕೊಂಡು ಕೊಡುತ್ತಾರೆ.

ಶ್ರೀ ಎ. ರಾಮದಾಸ್ : ಎರಡು ಬಾರಿಯೂ ಈ ರೀತಿಯೇ ಆಗಿದೆ.

ಉಪಾಧ್ಯಕ್ಷರು : ಮಾನ್ಯ ಮಂತ್ರಿಗಳು ಎರಡು ವಾರಗಳಲ್ಲಿ ಉತ್ತರ ಕೊಡುತ್ತಾರೆ.

ವಿಟ್ಲದಲ್ಲಿನ ಪ್ರಥಮ ದರ್ಜೆ ಕಾಲೇಜಿಗೆ ಕಟ್ಟಡ ನಿರ್ಮಾಣ

153 - ಶ್ರೀ ಎ. ರುಕ್ಮಯ್ಯ ಪೂಜಾರಿ (ವಿಟ್ಲ) : ಮಾನ್ಯ ಪ್ರಾಥಮಿಕ, ಪ್ರೌಢ ಹಾಗೂ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿಟ್ಲ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿಗೆ ಸ್ವಂತ ಕಟ್ಟಡ ಇಲ್ಲದೇ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ ಕಟ್ಟಡ ಕಟ್ಟಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು) :

ಅ) ಬಂದಿದೆ.

ಆ) ವಿಟ್ಲ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಕಟ್ಟಡಕ್ಕಾಗಿ 78.00 ಲಕ್ಷ ರೂ.ಗಳ ಅಂದಾಜು ಮತ್ತು ನಕ್ಷೆಯನ್ನು ಲೋಕೋಪಯೋಗಿ ಇಲಾಖೆಯಿಂದ ಪಡೆಯಲಾಗಿದ್ದು, ಆಡಳಿತಾತ್ಮಕ ಅನುಮೋದನೆ ನೀಡುವ ವಿಷಯದಲ್ಲಿ ಸರ್ಕಾರದ ಪರಿಶೀಲನೆಯಲ್ಲಿದೆ.